# ಶಿಕ್ಷಕ : ಬದಲಾವಣೆಯ ಹರಿಕಾರ

ಸ್ವಾಮಿ ನಿಖಿಲೇಶ್ವರಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

## ರಾಷ್ಟ್ರನಿರ್ಮಾಣ – ಶೀಲನಿರ್ಮಾಣದ ಮೂಲಕ

ರಾಷ್ಟ್ರನಿರ್ಮಾಣವನ್ನು ಹೇಗೆ ಸಾಧಿಸುವುದು? ಡಾ.ರಾಧಾಕೃಷ್ಣನ್ ಹೇಳುತ್ತಾರೆ, "ಇಟ್ಟಿಗೆಗಳಿಂದ ರಾಷ್ಟ್ರವನ್ನು ಕಟ್ಟಲಾದೀತೆ? ಇದು ಯುವಜನರ ಮಾನಸಿಕ ಸಂವರ್ಧನೆ ಮೂಲಕವೇ ಸಾಧ್ಯ". ಇದನ್ನೇ ಸ್ವಾಮಿ ವಿವೇಕಾನಂದರೂ ಕೂಡ ಹೇಳಿದ್ದಾರೆ. ಕಾನೂನುಗಳಿಂದ ಇವತ್ತಿನ ಪರಿಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಏಕೆಂದರೆ ಕಾನೂನನ್ನು ನ್ಯಾಯವಾಗಿಯೊ ಅನ್ಯಾಯವಾಗಿಯೊ ಅತಿಕ್ರಮಿಸುವ ವಿಧಾನಗಳನ್ನು ವಂಚಕರು ಕಂಡುಹಿಡಿದುಕೊಳ್ಳುತ್ತಿದ್ದಾರೆ.

ಭ್ರಷ್ಟಾಚಾರ ನಿರ್ಮೂಲವಾಗಿ, ಜನರ ಶೀಲ ನಿರ್ಮಾಣವಾಗದಿದ್ದರೆ ರಾಷ್ಟ್ರದ ಪುನರ್ನಿರ್ಮಾಣ ಸಾಧ್ಯವಿಲ್ಲ. ತಾನು ಕೆಲಸಮಾಡುವಾಗ ತನ್ನ ತುಂಟ ಮಗನನ್ನು ಸುಮ್ಮನಿರಿಸಲು, ತಂದೆಯು ಭಾರತದ ಭೂಪಟವನ್ನು ಹರಿದು ಸಣ್ಣ ಸಣ್ಣ ಚೂರುಗಳನ್ನಾಗಿ ಮಾಡಿ ಜೋಡಿಸಲು ಕೊಟ್ಟನು. "ನನ್ನ ಮಗನಿಗೆ ಭೂಗೋಳದ ಜ್ಞಾನ ಕಮ್ಮಿಯಾದ್ದರಿಂದ ಭೂಪಟ ಪುನಃ ಜೋಡಿಸಲು ಇಡೀ ದಿನ ಬೇಕಾಗಬಹುದು. ಇದರಿಂದ ನನ್ನ ಕೆಲಸಕ್ಕೆ ಯಾವ ಅಡಚಣೆಯೂ ಉಂಟಾಗುವುದಿಲ್ಲ" ಎಂದು ತಂದೆ ಯೋಚಿಸಿದ. ಆದರೆ ಕೆಲವೇ ನಿಮಿಷಗಳಲ್ಲಿ ಮಗ ಭೂಪಟವನ್ನು ಜೋಡಿಸಿ ತಂದಿದ್ದ. "ಹೇಗೆ ನೀನು ಇಷ್ಟು ಬೇಗ ಜೋಡಿಸಿದೆ?" ಎಂದು ತಂದೆ ಕೇಳಿದಾಗ, "ನಾನು ಭೂಪಟವನ್ನು ಕಷ್ಟಪಟ್ಟು ಜೋಡಿಸುತ್ತಿರುವಾಗ, ಭೂಪಟದ ಹಿಂದೆ ಒಬ್ಬ ಮನುಷ್ಯನ ಚಿತ್ರ ಇದ್ದುದನ್ನು ನೋಡಿದೆ. ಕೂಡಲೆ ಮನುಷ್ಯನ ಚಿತ್ರವು ಸರಿಹೊಂದುವಂತೆ ಚೂರುಗಳನ್ನು ಜೋಡಿಸಿದೆ. ಯಾವಾಗ ಮನುಷ್ಯನ ಚಿತ್ರ ಸರಿ ಬಂದಿತೋ ಆಗ ಭೂಪಟವು ಸರಿಯಾಗಿ ಕೂಡಿಕೊಂಡಿತು!" ಮನುಷ್ಯನನ್ನು ಸರಿಮಾಡಿದರೆ, ರಾಷ್ಟ್ರವು ತಾನಾಗಿ ಸರಿಯಾಗುತ್ತದೆ. ರಾಷ್ಟ್ರನಿರ್ಮಾಣಕ್ಕೆ ಮುಂಚಿತವಾಗಿ ಮನುಷ್ಯರ, ಪ್ರಜೆಗಳ ಶೀಲ ನಿರ್ಮಾಣವಾಗಬೇಕು. ಇಲ್ಲದೇ ಹೋದರೆ ರಾಷ್ಟ್ರವು ಪ್ರಗತಿಯನ್ನು ಸಾಧಿಸುವುದಿಲ್ಲ, ಸಂಘಟಿತವಾಗುವುದಿಲ್ಲ. ಇದಕ್ಕಾಗಿಯೇ ಮನುಷ್ಯನನ್ನು ಕೇಂದ್ರವಾಗಿರಿಸಿಕೊಂಡ ಶೀಲ ನಿರ್ಮಾಣದ ವಿದ್ಯೆ ಬೇಕಾಗಿದೆ ಎಂದು ಸ್ವಾಮಿ ವಿವೇಕಾನಂದರು ಸಾರಿ ಸಾರಿ ಹೇಳುತ್ತಿದ್ದರು.

ಸ್ವಾತಂತ್ರ್ಯ ಬಂದ ನಂತರ ಡಾ. ಕೊಠಾರಿ ಆಯೋಗ,




ಡಾ. ರಾಧಾಕೃಷ್ಣನ್ ಆಯೋಗ, ಪ್ರಕಾಶ್ ಸಮಿತಿಗಳು ಮೌಲ್ಯಾಧಾರಿತ ಶಿಕ್ಷಣವನ್ನು ಅಳವಡಿಸಲು ಶಿಫಾರಸು ಮಾಡಿದವು. ಆದರೆ ಅವು ಜಾರಿಗೆ ಬರಲಿಲ್ಲ. ನಮ್ಮ ಈಗಿನ ವಿದ್ಯೆ ವ್ಯಕ್ತಿ ನಿರ್ಮಾಣವನ್ನು ಮಾಡುವ ಬದಲಿಗೆ ರಾಕ್ಷಸರನ್ನು ಸೃಷ್ಟಿಸುತ್ತಿದೆ. ಭರ್ತೃಹರಿ ತನ್ನ ನೀತಿಶತಕದಲ್ಲಿ ನಾಲ್ಕು ವಿಧದ ಜನರ ಬಗ್ಗೆ ಹೇಳುತ್ತಾನೆ. ಅತ್ಯುತ್ತಮರಾದ ಸತ್ಪುರುಷರು ಸ್ವಾರ್ಥರಹಿತರಾಗಿ ಬೇರೆಯವರ ಸೇವೆ ಮಾಡುತ್ತಾರೆ. ಎರಡನೆಯ ವಿಧದ ಸಾಮಾನ್ಯರು ತಮ್ಮ ಸ್ವಂತಕ್ಕೆ ಒಳ್ಳೆಯದು ಮಾಡಿಕೊಂಡ ನಂತರ ಬೇರೆಯವರ ಸೇವೆ ಮಾಡುತ್ತಾರೆ. ಮೂರನೆಯ ಗುಂಪಿನವರು ಮಾನವರೂಪಿ ರಾಕ್ಷಸರು. ತಮ್ಮ ಸ್ವಾರ್ಥದಲ್ಲೆ ನಿರತರಾಗಿರುತ್ತಾರೆ. ಇದರಿಂದ ಬೇರೆಯವರಿಗೆ ತಾವು ಮಾಡುವ ಹಾನಿಯ ಬಗ್ಗೆ ಸ್ವಲ್ಪವೂ ಕಾಳಜಿ ವಹಿಸುವುದಿಲ್ಲ. ಇಂತಹವರು ನಮ್ಮ ಸಮಾಜದಲ್ಲಿ ಈಗ ವ್ಯಾಪಕವಾಗಿದ್ದಾರೆ. ಉದಾ.: ಸೇತುವೆ, ಅಣೆಕಟ್ಟು ನಿರ್ಮಾಣ ಮಾಡುವಾಗ ಕಂಟ್ರಾಕ್ಟರ್ ಲಂಚ ತೆಗೆದುಕೊಂಡು ಸಿಮೆಂಟ್ ಮಿಶ್ರಣದಲ್ಲಿ ಮರಳಿನ ಪ್ರಮಾಣ ಜಾಸ್ತಿ ಮಾಡಲು ಅವಕಾಶ ಮಾಡಿಕೊಡುತ್ತಾನೆ. ಮಳೆ ಬಂದಾಗ ಸೇತುವೆ, ಅಣೆ ಕಟ್ಟು ಒಡೆದು ನೂರಾರು ಜನರು ಸತ್ತು, ಸಾವಿರಾರು ಜನರು ನಿರಾಶ್ರಿತರಾಗುತ್ತಾರೆ. ಆದರೆ ಇಂಜಿನಿಯರ್ ಸಂತೋಷವಾಗಿರುತ್ತಾನೆ, ಏಕೆಂದರೆ ಅವನಿಗೆ ಲಂಚದ ಹಣದಿಂದ ಕಟ್ಟಿಸಿದ ಒಂದು ಸುಂದರ ಬಂಗಲೆ ಇದೆ! ಅವನ ಸ್ವಾರ್ಥ ಹಲವಾರು ಜನರನ್ನು ಹಾಗೂ ರಾಷ್ಟ್ರದ ಅಮೂಲ್ಯ ಆರ್ಥಿಕ ಸಂಪತ್ತನ್ನು ಬಲಿ ತೆಗೆದುಕೊಂಡಿತು. ಹಾಗೆಯೇ ಕೆಲವು ಡಾಕ್ಟರ್‌ಗಳಿಗೆ ತಮಗೆ ಬರುವ ಸಂಪಾದನೆಯ ಮೇಲೆ ಆಸಕ್ತಿಯೇ ಹೊರತು ರೋಗಿಯ ಆರೋಗ್ಯದ ಬಗ್ಗೆಯಲ್ಲ. ನಾಲ್ಕನೆ ತರಹದ ಜನರ ಬಗ್ಗೆ ಹೇಳಲು ಭರ್ತೃಹರಿಗೆ ಸರಿಯಾದ ಹೆಸರಿಲ್ಲ; ಏಕೆಂದರೆ ಅವರು ರಾಕ್ಷಸರಿಗಿಂತ ಬಹಳ

ನೀಚರಾಗಿದ್ದಾರೆ. ಸ್ವಂತಕ್ಕೆ ಪ್ರಯೋಜನವಿಲ್ಲದಿದ್ದರೂ, ಇತರರಿಗೆ ಇವರು ತೊಂದರೆ ಕೊಡುತ್ತಾರೆ. ಈ ನಾಲ್ಕು ತರಹ ಜನರ ಜೊತೆ ಇನ್ನೊಂದನ್ನು ಸೇರಿಸಬಹುದು—ಅವರೇ ಇಂದಿನ ಭಯೋತ್ಪಾದಕರು. ತಾವು ನಾಶವಾದರೂ ಬೇರೆಯವರನ್ನು ಹಿಂಸಿಸಲು ಅವರಿಗೆ ಬಹಳ ಆನಂದ. ಸಮಾಜದಲ್ಲಿ ಮೂರು, ನಾಲ್ಕು, ಮತ್ತು ಐದನೆಯ ತರಹದ ಜನರೇ ಜಾಸ್ತಿಯಿದ್ದಾರೆ. ಎರಡನೇ ಗುಂಪಿಗೆ ಸೇರಿದವರು ಕಮ್ಮಿ. ಮೊದಲನೇ ಗುಂಪಿನ ವರಂತೂ ಅಪರೂಪ. ಹೀಗಿರುವ ಇಂದಿನ ಸ್ಥಿತಿಯಲ್ಲಿ ವಿವೇಕಾನಂದರು ಹೇಳುವ ವ್ಯಕ್ತಿವಿಕಾಸದ ಶಿಕ್ಷಣ ಬಹಳ ಪ್ರಸ್ತುತವಾಗುತ್ತದೆ.

**ರಾಷ್ಟ್ರದ ವಿಷಮಸ್ಥಿತಿ – ಶೀಲದ ಕೊರತೆ**

ಏಪ್ರಿಲ್ ೧೬ರಂದು ನಾನು ರಾಷ್ಟ್ರಪತಿ ಡಾ. ಅಬ್ದುಲ್ ಕಲಾಮ್‌ರ ಜೊತೆ ಇದ್ದೆ. ಭ್ರಷ್ಟಾಚಾರದ ಕಾರಣದಿಂದ ಜಾಗತಿಕ ಬ್ಯಾಂಕ್‌ನ ಎಲ್ಲ ಸಂಪತ್ತನ್ನು ನಮ್ಮ ದೇಶಕ್ಕೆ ತಂದರೂ ನಮ್ಮ ದಾರಿದ್ರ್ಯ ನಿರ್ಮೂಲನವಾಗುವುದಿಲ್ಲ ಎಂಬ ನನ್ನ ಅಭಿಪ್ರಾಯವನ್ನು ಒಪ್ಪುತ್ತಾ ಇದಕ್ಕೆ ಪರಿಹಾರವೇನೆಂದು ರಾಷ್ಟ್ರಪತಿಯವರು ಕೇಳಿದರು. ವಿವೇಕಾನಂದರ ವ್ಯಕ್ತಿವಿಕಾಸ ಮತ್ತು ಶೀಲನಿರ್ಮಾಣ ಸಂದೇಶಗಳನ್ನು ಕಾರ್ಯಗತ ಮಾಡುವುದೇ ಇದಕ್ಕೆ ಪರಿಹಾರ ಎಂದು ತಿಳಿಸಿದೆ. ರಾಮಕೃಷ್ಣ ಮಿಷನ್ ಮಾಡುತ್ತಿರುವ ಮೌಲ್ಯಾಧಾರಿತ ವಿದ್ಯೆಯ ವಿಶೇಷ ಪ್ರಯೋಗಗಳ ಕುರಿತು ಮಾಹಿತಿಯನ್ನು ನೀಡಿದೆ. ರಾಷ್ಟ್ರಪತಿಯವರು ಸಂತೋಷಪಟ್ಟು, 'ಸ್ವಾಮೀಜಿ, ನಾವೆಲ್ಲರೂ ಒಟ್ಟಾಗಿ ಈ ಕೆಲಸವನ್ನು ಸಾಧಿಸೋಣ'' ಎಂದು ಹೇಳಿದರು.

**ಶೀಲವನ್ನು ಬೆಳೆಸುವುದು ಹೇಗೆ ?**

"ಒಂದು ವಿಚಾರ ಬಿತ್ತಿ ಕ್ರಿಯೆ ಪಡೆಯಿರಿ, ಕ್ರಿಯೆಯನ್ನು ಬಿತ್ತಿ ಅಭ್ಯಾಸ ಬೆಳೆಸಿ. ಅಭ್ಯಾಸವನ್ನು ಬಿತ್ತಿ ಶೀಲವನ್ನು ಹೊಂದಿ'' ಎಂಬ ಮಾತಿದೆ. ಸ್ವಾಮಿ ವಿವೇಕಾನಂದರು ಹೇಳುವಂತೆ, "ಯಾವುದೇ ವ್ಯಕ್ತಿಯ ಶೀಲವೆಂಬುದು ಮತ್ತೆ ಮತ್ತೆ ಮಾಡಿದ ಕ್ರಿಯೆಗಳಿಂದ ಉಂಟಾದ ಪ್ರವೃತ್ತಿಗಳ, ಮಾನಸಿಕ ಸಂಕಲ್ಪಗಳ ಮೊತ್ತ.'' ಮೇಲಿಂದಮೇಲೆ ಮಾಡುವ ಕ್ರಿಯೆಗಳು ಅಭ್ಯಾಸಗಳ ಮೊತ್ತವಾಗಿ ತನ್ಮೂಲಕ ಆ ವ್ಯಕ್ತಿಯ ಶೀಲವಾಗುತ್ತದೆ. ಹಿಂದಿನ ಜನ್ಮಗಳ ವಾಸನೆ ಅಥವಾ ಸಂಸ್ಕಾರಗಳ ಮೂಲಕವೂ ಶೀಲ ನಿರ್ಮಿತವಾಗುತ್ತದೆ. ಒಬ್ಬನ ಸಂಸ್ಕಾರಗಳ ಬೆಳವಣಿಗೆಯಲ್ಲಿ ನಾಲ್ಕು ಅಂಶಗಳು ಮಹತ್ವದ ಪಾತ್ರ ವಹಿಸುತ್ತವೆ. ಒಂದು, ಹಿಂದಿನ ಜನ್ಮದ ಸಂಸ್ಕಾರ; ಎರಡು, ತಂದೆತಾಯಿಗಳ ಮೂಲಕ ಪಡೆದ ವಂಶವಾಹಿಗಳು; ಮೂರು, ವ್ಯಕ್ತಿಯ ಸಾಮಾಜಿಕ ಪರಿಸರ; ನಾಲ್ಕು ಮತ್ತು ಅತಿ ಮುಖ್ಯ ವಿಚಾರ ಶಿಕ್ಷಕ. ಒಂದು ಸುಭದ್ರವಾದ ಕಟ್ಟಡಕ್ಕೆ ಗಟ್ಟಿಯಾದ ಅಡಿಪಾಯ ಹೇಗೆ ಅಗತ್ಯವೋ ಹಾಗೆಯೇ ರಾಷ್ಟ್ರನಿರ್ಮಾಣಕ್ಕೆ ಪ್ರಜೆಗಳ ಶೀಲನಿರ್ಮಾಣ ಅಗತ್ಯ. ಶೀಲ ನಿರ್ಮಾಣಕ್ಕೆ ಸಣ್ಣ ವಯಸ್ಸಿನಿಂದಲೆ ಅಡಿಪಾಯ ಹಾಕಬೇಕು. ಏಕೆಂದರೆ ವಿದ್ಯಾರ್ಥಿಯಾಗಿದ್ದಾಗ ಶೀಲವನ್ನು ರೂಢಿಸುವುದು ಸುಲಭ. ಈ ಪರಿವರ್ತನೆಯಲ್ಲಿ ಶಿಕ್ಷಕನ ಪಾತ್ರ ವಿಶೇಷವಾದದ್ದು.

ಈ ದಿಸೆಯಲ್ಲಿ ನಮ್ಮ ರಾಷ್ಟ್ರಪತಿಯವರು "ಭಾರತ ೨೦೨೦—ಹೊಸ ಸಹಸ್ರಮಾನದ ದರ್ಶನ'' ಪುಸ್ತಕದಲ್ಲಿ ಹೀಗೆನ್ನುತ್ತಾರೆ: "ನೀವು ಶಿಕ್ಷಕರಾಗಿದ್ದರೆ ನಿಮಗೆ ವಿಶೇಷವಾದ ಕರ್ತವ್ಯವಿದೆ. ಏಕೆಂದರೆ ಮುಂದಿನ ಪೀಳಿಗೆಯನ್ನು ನೀವು ತಯಾರು ಮಾಡುತ್ತಿರುವಿರಿ.'' ಇಲ್ಲಿ ಪರಿವರ್ತನೆಯ ಹರಿಕಾರರಾಗಿ ಶಿಕ್ಷಕರ ಪಾತ್ರ ಬರುತ್ತದೆ. ಬೃಹತ್ತಾದ ಬದಲಾವಣೆ ಆಗಬೇಕಾದರೆ ಮೊದಲು ವ್ಯಕ್ತಿಗತ ಪಾತಳಿಯಲ್ಲಿ ಬದಲಾವಣೆ ಆಗಬೇಕು. ರಾಷ್ಟ್ರವು ಉಳಿಯಬೇಕಾದರೆ ಬಹುತೇಕ ಪ್ರಜೆಗಳ ಶೀಲವೃದ್ಧಿ ಆಗಬೇಕು. ಇಲ್ಲದೇ ಹೋದರೆ ರಾಷ್ಟ್ರದ ಪ್ರಗತಿ ಸಾಧ್ಯವಾಗುವುದಿಲ್ಲ. CBSE ವಿರುದ್ಧ ತೀರ್ಪು ನೀಡಿ "ಸಂಸ್ಕೃತ ಐಚ್ಛಿಕ ಭಾಷೆಯಾಗಿ ಮುಂದುವರಿಯಬೇಕು; ಅದನ್ನು ಪಠ್ಯಕ್ರಮದಿಂದ ತೆಗೆದುಹಾಕಲು ಸಾಧ್ಯವಿಲ್ಲ; ಸಂಸ್ಕೃತ ಭಾಷೆ ನಮ್ಮ ಭಾರತೀಯ ಸಂಸ್ಕೃತಿಯ ಅಡಿಪಾಯ'' ಎಂದು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹನ್ಸಾರಿಯಾ ತೀರ್ಪು ನೀಡಿದರು. ಇದಕ್ಕೆ ಪೂರಕವಾಗಿ ಒಂದು ಉದಾಹರಣೆಯನ್ನು ಪ್ರಸ್ತುತ ಪಡಿಸಿದರು. ಬ್ರಿಟನ್ ಮತ್ತು ಜರ್ಮನಿ ದೇಶಗಳ ನಡುವೆ ಯುದ್ಧ ನಡೆಯುತ್ತಿತ್ತು. ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಒಬ್ಬರು ಪ್ರಾಧ್ಯಾಪಕರು ತಮ್ಮ ಕೋಣೆಯಲ್ಲಿ ಅಧ್ಯಯನ ಮಾಡುತ್ತಿದ್ದರು. ಒಬ್ಬ ಸೈನಿಕ ಅವರ ಕೋಣೆಗೆ ನುಗ್ಗಿ, ನಾವು ರಾಷ್ಟ್ರಕ್ಕಾಗಿ ಹೋರಾಡುತ್ತಿರುವಾಗ ನೀವು ಏನೂ ಮಾಡದೆ ಸುಮ್ಮನೆ ಕೂತಿದ್ದೀರಿ ಎಂದು ಮೂದಲಿಸಿದ. ಆಗ ಪ್ರಾಧ್ಯಾಪಕರು ರಾಷ್ಟ್ರದ ರಕ್ಷಣೆ ಎಂದರೆ ಅರ್ಥವೇನೆಂದು ಕೇಳಿದರು. 'ಅರ್ಥವಿಷ್ಟೇ, ರಾಷ್ಟ್ರದ ಸೀಮಾರಕ್ಷಣೆ' ಎಂದು ಸೈನಿಕ ಉತ್ತರಿಸಿದ. ಪ್ರಾಧ್ಯಾಪಕರು 'ಇದಕ್ಕೆ ಮತ್ತಷ್ಟು ಅರ್ಥವಿರಬೇಕು, ಆಲೋಚಿಸು' ಎಂದು ಹೇಳಿದರು. ಸೈನಿಕ ಸ್ವಲ್ಪ ಯೋಚನೆ ಮಾಡಿ 'ರಾಷ್ಟ್ರರಕ್ಷಣೆ ಎಂದರೆ ರಾಷ್ಟ್ರದ ಜನ ಮತ್ತು ಸಂಸ್ಕೃತಿಗಳ ರಕ್ಷಣೆ' ಎಂದು ತಿಳಿಸಿದ. ಪ್ರಾಧ್ಯಾಪಕರು 'ನಾನು ಕೂಡ ರಾಷ್ಟ್ರದ ಸಂಸ್ಕೃತಿಯನ್ನು ಕಾಪಾಡುತ್ತಿದ್ದೇನೆ' ಎಂದು ಹೇಳಿದರು. ಇದನ್ನು ಕೇಳಿ ಸೈನಿಕನು ಪ್ರಾಧ್ಯಾಪಕರಿಗೆ ವಂದಿಸಿ ಹೊರಟುಹೋದ.

**ಪರಿವರ್ತನೆಯ ಹರಿಕಾರರು – ಕೆಲವು ಉದಾಹರಣೆಗಳು**

ಸಾಮಾನ್ಯ ಶಿಕ್ಷಕರೂ ಹೇಗೆ ಸಮಾಜದಲ್ಲಿ ಅಸಾಧಾರಣವಾದ ಬದಲಾವಣೆಯನ್ನು ತಂದಿದ್ದಾರೆ ಎಂಬುದರ ಬಗ್ಗೆ

ಕೆಲವು ಉದಾಹರಣೆಗಳನ್ನು ನೀಡಬಹುದು. ಶ್ರೀ ಮಹೇಂದ್ರ ನಾಥ ಗುಪ್ತರು ಕಲ್ಕತ್ತದಲ್ಲಿ ಒಬ್ಬ ಸಾಮಾನ್ಯ ಶಿಕ್ಷಕರಾಗಿದ್ದರು. ಒಮ್ಮೆ ದಕ್ಷಿಣೇಶ್ವರದಲ್ಲಿ ವಾಸವಾಡುತ್ತಿದ್ದ ರಾಮಕೃಷ್ಣ ಪರಮಹಂಸರನ್ನು ನೋಡಲು ಹೋದರು. ಆಗ ಅವರಿಗೆ ಕೌಟುಂಬಿಕ ಸಮಸ್ಯೆಗಳು ಬಹಳವಾಗಿದ್ದು, ಆತ್ಮಹತ್ಯೆ ಮಾಡಿಕೊಳ್ಳುವ ಯೋಚನೆಯಲ್ಲಿದ್ದರು. ಪರಮಹಂಸರಿಂದ ಬಹಳಷ್ಟು ಮನಶ್ಶಾಂತಿ ಪಡೆದಾಗ ಆತ್ಮಹತ್ಯೆ ಮಾಡುವ ವಿಚಾರ ಕೈಬಿಟ್ಟರು. ಅವರ ಬಳಿಗೆ ಪದೇ ಪದೇ ಹೋಗಿ, ಪರಮಹಂಸರು ಭಕ್ತಾದಿಗಳ ಜೊತೆ ನಡೆಸುತ್ತಿದ್ದ ಸಂವಾದ ಗಳನ್ನು ತಮ್ಮ ದಿನಚರಿಯಲ್ಲಿ ಬರೆಯತೊಡಗಿದರು. ನಂತರ ಇದು ವಿವೇಕಾನಂದರಿಗೆ ಗೊತ್ತಾದಾಗ ಅವರಿಗೆ ಸಂತೋಷ ವಾಗಿ ಅವುಗಳನ್ನು ಪುಸ್ತಕರೂಪದಲ್ಲಿ ತರಬೇಕೆಂದು ಸೂಚಿಸಿ ದರು. 'ಶ್ರೀರಾಮಕೃಷ್ಣ ಕಥಾಮೃತ' ಎಂದು ಪುಸ್ತಕರೂಪದಲ್ಲಿ ಪ್ರಕಟವಾಗಿ ನಂತರ ಇಂಗ್ಲಿಷ್‌ನಲ್ಲಿ 'ದಿ ಗಾಸ್ಪೆಲ್ ಆಫ್ ಶ್ರೀರಾಮಕೃಷ್ಣ' ಎಂದು ಪ್ರಕಟವಾಯಿತು. ನಂತರ ಹಿಂದಿ, ಗುಜರಾತಿ, ತಮಿಳು, ತೆಲುಗು, ಮರಾಠಿ, ಕನ್ನಡ ಮಲಯಾಳ, ಒರಿಯಾ, ಸ್ಪಾನಿಷ್, ಜಪಾನಿ, ರಷ್ಯನ್, ಡಚ್, ಗ್ರೀಕ್, ಫ್ರೆಂಚ್ ಮತ್ತು ಇನ್ನೂ ವಿಶ್ವದ ಅನೇಕ ಭಾಷೆಗಳಲ್ಲಿ ತರ್ಜುಮೆ ಗೊಂಡಿತು. ಲಕ್ಷಾಂತರ ಪ್ರತಿಗಳು ಖರ್ಚಾಗಿ ಕಳೆದ ನೂರು ವರ್ಷಗಳಲ್ಲಿ ಲಕ್ಷಗಟ್ಟಲೆ ಜನರಿಗೆ ಮನಶ್ಶಾಂತಿ ಮತ್ತು ಅಧ್ಯಾತ್ಮ ಬೆಳಕನ್ನು ಕೊಟ್ಟಿದೆ, ಆತ್ಮಹತ್ಯೆ ಮಾಡಿಕೊಳ್ಳುವವರನ್ನು ಸಂರಕ್ಷಿಸಿದೆ. "ಸಂಪೂರ್ಣವಾಗಿ ನಿನ್ನನ್ನು ಮರೆಯಲ್ಲಿರಿಸಿ ಕೊಂಡಿರುವಿ. ಸಾಕ್ರೆಟೀಸನ ಸಂವಾದಗಳಲ್ಲಿ ಎಲ್ಲೆಡೆ ಪ್ಲೇಟೋನೇ ಕಂಡುಬರುತ್ತಾನೆ. ಸಂವಾದದ ಶೈಲಿಯಲ್ಲಿ ಬರೆದಿರುವ ರೀತಿ ಬಹಳ ಚೆನ್ನಾಗಿದೆ. ಪೂರ್ವ ಮತ್ತು ಪಶ್ಚಿಮದಲ್ಲೆಲ್ಲ ಜನ ಅದನ್ನು ಮೆಚ್ಚಿದ್ದಾರೆ" ಎಂದು (ವಿನಯದಿಂದ ತನ್ನನ್ನು 'ಮ' ಎಂದು ಕರೆದುಕೊಂಡಿರುವ) ಮಹೇಂದ್ರನಾಥ ಗುಪ್ತರನ್ನು ವಿವೇಕಾನಂದರು ೨೪.೧೧.೧೮೯೭ರಲ್ಲಿ ಬರೆದ ಪತ್ರದಲ್ಲಿ ಅಭಿನಂದಿಸಿದ್ದಾರೆ. "ಸ್ವಾಭಾವಿಕವಾದ ಕೌಶಲಗಳನ್ನು ಉಪಯೋಗಿಸಿಕೊಂಡು, ತನ್ನ ಸಂದರ್ಭಕ್ಕನುಗುಣವಾಗಿ 'ಮ' ಅವರು ಧರ್ಮಗ್ರಂಥಗಳಲ್ಲಿ ಅಪೂರ್ವವೆನ್ನಬಹುದಾದ ಒಂದು ಅಸಾಧಾರಣ ಕೃತಿಯನ್ನು ನೀಡಿದ್ದಾರೆ" ಎಂದು ತತ್ತ್ವಜ್ಞಾನಿ ಆಲ್ಡಸ್ ಹಕ್ಸ್ಲಿ ತಮ್ಮ ಮುನ್ನುಡಿಯಲ್ಲಿ ಬರೆದಿದ್ದಾರೆ.

ಇನ್ನೊಂದು ಉದಾಹರಣೆಯೇ ಸೋದರಿ ನಿವೇದಿತಾ (೧೮೬೭-೧೯೧೧). ಅವಳ ನಿಜವಾದ ಹೆಸರು ಮಾರ್ಗರೆಟ್ ನೋಬೆಲ್. ಸಾಮಾನ್ಯ ಶಿಕ್ಷಕಿಯಾಗಿ ಇಂಗ್ಲೆಂಡ್‌ನಲ್ಲಿ ಕೆಲಸ ಮಾಡುತ್ತಿದ್ದ ಆಕೆ ವಿವೇಕಾನಂದರ ಭಾಷಣಗಳಿಂದ ಬಹಳ ಪ್ರಭಾವಿತಳಾದಳು. ಆಕೆಯಲ್ಲಿದ್ದ ಪ್ರತಿಭೆಯನ್ನು ಕಂಡು ಭಾರತಕ್ಕಾಗಿ ಅವಳ ಜೀವನವನ್ನು ಮುಡಿಪಾಗಿಡಲು ವಿವೇಕಾನಂದರು ಹೇಳಿದರು. ಮಹಿಳೆಯರು ಉದ್ಧಾರವಾಗದೆ ದೇಶದ ಉದ್ಧಾರ ಸಾಧ್ಯವಿಲ್ಲ. ಅವರು ಉದ್ಧಾರವಾಗಬೇಕಾದರೆ ಮೊದಲು ಅವರು ವಿದ್ಯಾವಂತರಾಗಬೇಕು ಎಂದು ತಿಳಿದಿದ್ದ ಸ್ವಾಮೀಜಿ ನಿವೇದಿತಾಳನ್ನು ಆ ಕೆಲಸಕ್ಕೆ ಪ್ರೇರೇಪಿಸಿದರು. ಆ ಕಾಲದಲ್ಲಿ ಶೇ.೧ರಷ್ಟು ಮಹಿಳೆಯರು ಮಾತ್ರ ವಿದ್ಯಾವಂತ ರಾಗಿದ್ದರು. ಮಹಿಳೆಯರಿಗೋಸ್ಕರ ಒಂದು ವಿದ್ಯಾಲಯವನ್ನು ಪ್ರಾರಂಭಿಸಬೇಕೆಂದಿದ್ದರು. ಆದರೆ ಯಾರೂ ಮುಂದೆ ಬರಲಿಲ್ಲ. ೭.೬.೧೮೯೬ರಂದು ಬರೆದ ಒಂದು ಪತ್ರದಲ್ಲಿ "ಎದ್ದೇಳು, ಎದ್ದೇಳು, ಜಗತ್ತು ಕಾರ್ಪಣ್ಯದಿಂದ ಉರಿದು ಹೋಗುತ್ತಿದೆ. ನೀನು ನಿದ್ದೆ ಮಾಡಬಹುದೆ? ನಿದ್ದೆ ಮಾಡುತ್ತಿರುವ ದೇವರು ಎಚ್ಚರಗೊಳ್ಳುವ ತನಕ ಕರೆಯೋಣ. ನಮಗೆ ದೇವರು ಉತ್ತರಿಸುವ ತನಕ ಕರೆಯೋಣ. ಜಗತ್ತಿಗೆ ಬೆಳಕನ್ನು ಯಾರು ಕೊಡುತ್ತಾರೆ? ತ್ಯಾಗ, ಬಲಿದಾನಗಳೇ ಹಿಂದಿನಿಂದ ನಡೆದು ಬಂದ ನೀತಿ. ಬಹುಜನ ಹಿತಾಯ, ಬಹುಜನ ಸುಖಾಯ ಧೀರರು ಬಲಿದಾನ ಮಾಡಬೇಕು" ಎಂದು ಬರೆದರು. ಭಾರತದ ಸೇವೆಗಾಗಿ ತನ್ನ ಇಡೀ ಜೀವನವನ್ನೇ ಮಿಸ್ ನೋಬೆಲ್ ನಿವೇದಿಸಿಕೊಂಡರು. ವಿವೇಕಾನಂದರು ಆಕೆಗೆ ಬ್ರಹ್ಮಚರ್ಯ ದೀಕ್ಷೆಯನ್ನು ಕೊಟ್ಟು 'ನಿವೇದಿತಾ' ಎಂಬ ನಾಮಕರಣ ಮಾಡಿದರು. 'ನಿವೇದಿತಾ' ಎಂದರೆ ತನ್ನನ್ನು ಸಮರ್ಪಣೆ ಮಾಡಿಕೊಂಡವಳು. ಅವಳ ಜೀವನಚರಿತ್ರೆ ಓದಲೇಬೇಕಾದುದು. ಆಕೆ ಪ್ರಾರಂಭಿಸಿದ ಶಾಲೆಯಿಂದು ನಿವೇದಿತಾ ಕನ್ಯಾಶಾಲೆಯೆಂದು ಪ್ರಸಿದ್ಧವಾಗಿದೆ. ಇತ್ತೀಚೆಗೆ ಶಾಲೆಯ ಶತಮಾನೋತ್ಸವದಲ್ಲಿ ಮಾಜಿ ರಾಷ್ಟ್ರಪತಿ ಶ್ರೀ ನಾರಾಯಣನ್ ಭಾಗವಹಿಸಿದ್ದರು.

ಅಂದಿನ ಸಾಮಾಜಿಕ ಪದ್ಧತಿಯಲ್ಲಿ, ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಲು ಮನೆಯವರು ಹಿಂಜರಿಯುತ್ತಿದ್ದರು. ನಿವೇದಿತಾ ಮನೆಮನೆಗೆ ಹೋಗಿ ಹುಡುಗಿಯರನ್ನು ಶಾಲೆಗೆ ಕೊಂಡೊಯ್ದು, ಸುರಕ್ಷಿತವಾಗಿ ವಾಪಸ್ಸು ಕರೆದುತಂದು ಬಿಡುತ್ತೇನೆ ಎಂದು ಭರವಸೆ ಕೊಡಬೇಕಾಗಿತ್ತು. ಶಾಲೆಯಲ್ಲಿ ಉಚಿತ ಆಹಾರ ಕೊಟ್ಟು, ಯಾವುದೇ ಶುಲ್ಕವನ್ನೂ ತೆಗೆದು ಕೊಳ್ಳುತ್ತಿರಲಿಲ್ಲ. ಪ್ರತಿಯೊಬ್ಬ ಹುಡುಗಿಯ ಬಗ್ಗೆ ಕಾಳಜಿ ವಹಿಸಿ ಅವಳ ಪ್ರಗತಿಯ ಕುರಿತು ತನ್ನ ದಿನಚರಿಯಲ್ಲಿ ಬರೆಯು ತ್ತಿದ್ದಳು. 'ಲೋಕಮಾತಾ ನಿವೇದಿತಾ' ಎಂದು ರವೀಂದ್ರನಾಥ ಟಾಗೋರ್ ಆಕೆಯನ್ನು ಕರೆಯುತ್ತಿದ್ದರು. ಕ್ರಾಂತಿಕಾರಿಗಳಿಗೆ ಈಕೆ ಸ್ಫೂರ್ತಿ. ಎಷ್ಟೇ ಕೆಲಸದ ಒತ್ತಡವಿರಲಿ ವಿದ್ಯಾರ್ಥಿನಿ ಯರಿಗೆ ಹಾಗೂ ಕ್ರಾಂತಿಕಾರಿಗಳಿಗೆ ಈಕೆ ಸದಾ ಲಭ್ಯಳು. ನಿವೇದಿತಾ ಮತ್ತು ಇತರರಿಂದ ಶುರುವಾದ ಕ್ರಾಂತಿಕಾರಿ ಚಳುವಳಿಯು ಭಾರತದ ಸ್ವಾತಂತ್ರ್ಯದಲ್ಲಿ ಪರಿಸಮಾಪ್ತಿ ಯಾಯಿತು. ಬ್ರಿಟನ್ ವಿರುದ್ಧದ ಚಳುವಳಿಯಲ್ಲಿ ಬ್ರಿಟನ್‌ನ

ಒಬ್ಬಳು ಶಿಕ್ಷಕಿ ಬಹು ದೊಡ್ಡ ಪಾತ್ರ ವಹಿಸಿದಳು. ಎಂತಹ ವಿಚಿತ್ರ! ವಿಜ್ಞಾನಿ ಜಗದೀಶ ಚಂದ್ರ ಬೋಸ್‌ರ ಮನೆಗೆ ರಾತ್ರಿಯ ಊಟಕ್ಕೆ ಒಮ್ಮೆ ಹೋಗಿದ್ದಳು. ತನ್ನ ವಿದ್ಯಾರ್ಥಿನಿ, ಪ್ರಫುಲ್ಲಮಯೀ ಎಂಬ ಬಾಲವಿಧವೆ, ಆ ದಿನ ಏಕಾದಶಿಯ ಪ್ರಯುಕ್ತ ಉಪವಾಸವಿದ್ದಾಳೆ, ಅವಳಿಗೆ ಫಲಾಹಾರ ನೀಡ ಬೇಕೆಂದು ಒಮ್ಮೆಲೆ ನಿವೇದಿತಾಗೆ ನೆನಪಾಯಿತು. ಬೋಸ್‌ರ ಕ್ಷಮೆ ಕೇಳಿ ತಕ್ಷಣ ಅವರ ಮನೆಯಿಂದ ಹೊರಟು, ಶಾಲೆಗೆ ಬಂದು ಪ್ರಫುಲ್ಲಳಿಗೆ ಫಲಾಹಾರ ಕೊಟ್ಟು ತಡವಾಗಿದ್ದಕ್ಕೆ ಕ್ಷಮೆ ಕೇಳಿದಳು. ಅವಳ ನಿಷ್ಠೆ ಈ ರೀತಿ ಇತ್ತು.

ಸ್ವಾಮಿ ಪ್ರೇಮೇಶಾನಂದಜಿ (೧೮೮೪-೧೯೬೭) ಕೂಡ ಒಬ್ಬ ಸಾಮಾನ್ಯ ಶಿಕ್ಷಕರಾಗಿದ್ದರು. ಹಲವಾರು ವಿದ್ಯಾರ್ಥಿಗಳು ಅವರಿಂದ ಸ್ಫೂರ್ತಿ ಪಡೆದು ಪ್ರಖ್ಯಾತ ಲೇಖಕರು, ಕವಿಗಳಾಗಿದ್ದಾರೆ. ಅವರ ಪ್ರಭಾವಕ್ಕೊಳಗಾಗಿ ತ್ಯಾಗಜೀವನವನ್ನು ಸ್ವೀಕರಿಸಿದ ಕೆಲವು ಸನ್ಯಾಸಿಗಳು ಡೆಲ್ಲಿ, ಹಾಲಿವುಡ್ ಮುಂತಾದ ರಾಮಕೃಷ್ಣ ಮಿಷನ್ ಕೇಂದ್ರಗಳ ಅಧ್ಯಕ್ಷರಾಗಿದ್ದಾರೆ.

ಒಬ್ಬ ಸಾಮಾನ್ಯ ಶಿಕ್ಷಕ ಮಹತ್ತರವಾದ ಕ್ರಿಯೆಗಳನ್ನು ಸಾಧಿಸಬಲ್ಲ. ಆದ್ದರಿಂದ ಶಿಕ್ಷಕರು ಸದಾ ಗೌರವಾರ್ಹರು. ಆದರೆ ಈಚಿನ ದಿನಗಳಲ್ಲಿ ಕೆಲವು ಶಿಕ್ಷಕರು ಗೌರವಯುತವಾಗಿ ನಡೆದುಕೊಳ್ಳುತ್ತಿಲ್ಲ. ಇದರಿಂದ ಒಂದು ವಿಷವರ್ತುಲ ನಿರ್ಮಾಣವಾಗಿದೆ. ಇವತ್ತು ಶಿಕ್ಷಕರಿಗೆ ಸೂಕ್ತ ಗೌರವ ಸಿಗುತ್ತಿಲ್ಲ. ಸಮಾಜದಲ್ಲಿ ಬೇರೆ ಜನರು ಹಣದ ಹಿಂದೆ ಬಿದ್ದಿರುವಾಗ, ನಾವೇಕೆ ಅವರನ್ನು ಅನುಸರಿಸಬಾರದು ಎಂದು ಇಂದಿನ ಶಿಕ್ಷಕರೂ ಭಾವಿಸುತ್ತಿದ್ದಾರೆ. ತಾವು ಪರಿವರ್ತನೆಯ ಹರಿಕಾರರಾಗಿ ಸಮಾಜದ ಮುಂದಾಳುತನವನ್ನು ವಹಿಸಬೇಕು ಎಂಬುದನ್ನು ಮರೆತಿದ್ದಾರೆ. ಈ ವಿಷವರ್ತುಲವನ್ನು ಭೇದಿಸಲು ಶಿಕ್ಷಕರು ಸ್ವಲ್ಪ ತ್ಯಾಗಕ್ಕೆ ಸಿದ್ಧರಾಗಬೇಕು. ತ್ಯಾಗವಿಲ್ಲದೆ ಪ್ರಗತಿ ಸಾಧ್ಯವಿಲ್ಲವೆಂಬುದೇ ಅನಾದಿ ಕಾಲದ ನಿಯಮ. ಶಿಕ್ಷಕರೇ ರಾಷ್ಟ್ರ ನಿರ್ಮಾಪಕರು. (ಮುಂದುವರಿಯುವುದು)

### ಆಶ್ರಮದ ವಿಶೇಷ ಉತ್ಸವದ ದಿನಗಳು

**ನವೆಂಬರ್ ೨೦೦೬**

| | | |
|---|---|---|
| ೦೧ | ಏಕಾದಶಿ | ಬುಧವಾರ |
| ೦೨ | ಸ್ವಾಮಿ ಸುಬೋಧಾನಂದ ಜಯಂತಿ | ಗುರುವಾರ |
| ೦೪ | ಸ್ವಾಮಿ ವಿಜ್ಞಾನಾನಂದ ಜಯಂತಿ | ಶನಿವಾರ |
| ೧೬ | ಏಕಾದಶಿ | ಗುರುವಾರ |
| ೨೯ | ಸ್ವಾಮಿ ಪ್ರೇಮಾನಂದ ಜಯಂತಿ | ಬುಧವಾರ |

## ಪ್ರಹಸನ ಪ್ರಸಂಗ

**ಮೂವರು** ಯುವಕರು ದೇಶಪ್ರೇಮದ ಕುರಿತು ಮಾತನಾಡುತ್ತಿದ್ದರು. ತಮ್ಮ ದೇಶಪ್ರೇಮವನ್ನು ವ್ಯಕ್ತಪಡಿಸುತ್ತ ಹೇಳಿದರು:

ಮೊದಲನೆಯವ: ನಾನು ವಿದೇಶಿ ವಸ್ತುಗಳನ್ನು ಎಂದೂ ಉಪಯೋಗಿಸಿಲ್ಲ.

ಎರಡನೆಯವ: ನಾನು ವಿದೇಶಿ ಚಲನಚಿತ್ರಗಳನ್ನು ನೋಡಲೇ ಇಲ್ಲ.

ಮೂರನೆಯವ: ನಾನು ಶಾಲೆಗೆ ಹೋಗಲು ಪ್ರಾರಂಭಿಸಿದಾಗಿನಿಂದ ಇಂಗ್ಲಿಷಿನಲ್ಲಿ ತೇರ್ಗಡೆಯಾಗಲೇ ಇಲ್ಲ!

* * *

**ಗಂಡ** ಬಹಳ ಬೇಗ ಆಫೀಸಿನಿಂದ ಹಿಂತಿರುಗಿ ಬಂದಾಗ ಹೆಂಡತಿ ಕೇಳಿದಳು, "ಏನ್ರೀ, ಯಾಕಿಷ್ಟು ಬೇಗ ಬಂದುಬಿಟ್ಟಿರಿ?" ಗಂಡ : "ನನ್ನ ಬಾಸ್ ಇವತ್ತು ಬಹಳ ರೇಗಾಡಿಬಿಟ್ಟ. ನರಕಕ್ಕೆ ಹೋಗು ಎಂದು ಹೇಳಿದ. ಅದಕ್ಕೇ ಮನೆಗೆ ಬಂದೆ!"

* * *

**ಹೆಂಡತಿ** (ಗಂಡನಿಗೆ): ನಾನು ಬಹಳ ನೊಂದುಕೊಂಡಿದ್ದೇನೆ. ನನ್ನ ಸಂಬಂಧಿಕರ ಬಗ್ಗೆ ಕಿಂಚಿತ್ತೂ ಪ್ರೀತಿಯಿಲ್ಲ ನಿಮಗೆ.

ಗಂಡ: ಛೆ! ಛೆ! ಇದು ಶುದ್ಧ ಸುಳ್ಳು. ನನ್ನ ಅತ್ತೆಗಿಂತ ನಿನ್ನ ಅತ್ತೆಯನ್ನು ನಾನು ಹೆಚ್ಚು ಪ್ರೀತಿಸುತ್ತೇನೆ!

**ಹೋಟೆಲಿನಲ್ಲಿ** ಭರ್ಜರಿ ಊಟ ಮಾಡಿ ಮನೆಗೆ ಮರಳಿದ ನಂತರ ರಂಗಯ್ಯನಿಗೆ ಹೊಟ್ಟೆ ತೊಳೆಸಲಾರಂಭಿಸಿತು. ಆಹಾರದಲ್ಲಿ ಏನಾದರೂ ವ್ಯತ್ಯಾಸವಾಗಿರಬಹುದೆಂದು ಕೂಡಲೇ ಹೋಟೆಲಿಗೆ ಕರೆ ಮಾಡಿದ.

ಮಾಲಿಕ: ಹೌದೇ! ನನಗೆ ನಂಬಲಾಗುತ್ತಿಲ್ಲ. ನೀವು ಏನನ್ನು ತರಿಸಿಕೊಂಡಿರಿ?

ರಂಗಯ್ಯ: ದೋಸೆ ಹಾಗೂ ಮೊಸರನ್ನ.

ಮಾಲಿಕ : ಆಶ್ಚರ್ಯ! ಸಾಮಾನ್ಯವಾಗಿ ರೈಸ್ ಭಾತ್ ತಿಂದರೆ...!

* * *

**ಇಬ್ಬರು** ಶಸ್ತ್ರಚಿಕಿತ್ಸಾ ತಜ್ಞರು ಹಾಗೂ ಒಬ್ಬ ಚರ್ಮರೋಗ ತಜ್ಞರು ಭೋಜನದ ವೇಳೆಯಲ್ಲಿ ಆರಾಮವಾಗಿ ಕುಳಿತು ಮಾತನಾಡುತ್ತಿದ್ದರು. ಶಸ್ತ್ರಚಿಕಿತ್ಸಾ ತಜ್ಞರಿಬ್ಬರು ಯಾವುದೋ ಒಂದು ವಿಷಯವನ್ನು ಕುರಿತಾಗಿ ಚರ್ಚಿಸುತ್ತಾ ತಮ್ಮತಮ್ಮಲ್ಲೇ ಜೋರಾಗಿ ನಗಲಾರಂಭಿಸಿದರು. ಏನೂ ಅರ್ಥವಾಗದ ಚರ್ಮರೋಗ ತಜ್ಞ ಕೇಳಿದ, "ಏನದು ತಮಾಷೆ? ಅಷ್ಟೊಂದು ನಗುತ್ತಿದ್ದೀರಲ್ಲ!" ಅವರಲ್ಲೊಬ್ಬ ಉತ್ತರಿಸಿದ, "ನಿನಗೆ ಅದು ಅರ್ಥವಾಗುವುದಿಲ್ಲ. ಅದು ಒಳಗಿನ ವ್ಯಾಪಾರ!"